ಒ.ಎಸ್. ನಂ.1/2023
ಪಿ.ಡಬ್ಲ್ಯೂ– 2

ದಿನಾಂಕ 10–04–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ** 6 ಮತ್ತು 8 ಪ್ರತಿವಾದಿ ಪರ ಶ್ರೀ. ಜೆ. ಟಿ. ಎಚ್. ವಕೀಲರಿಂದ

19. ನಾನು ಹಾಗೂ ಪ್ರತಿವಾದಿ 6 ರಿಂದ 9 ರವರು ಮೃತ ಪುರುಷೋತ್ತಮ ರವರ ಕವಲಿನವರು ಎಂದರೆ ಸರಿ. 1 ನೇ ಪ್ರತಿವಾದಿ ಕೃಷ್ಣಾ ಅಜ್ಜಣ್ಣ ನಾಯ್ಕ ರವರ ಕವಲಿನವರು. ಕೃಷ್ಣಾ ಅಜ್ಜಣ್ಣ ನಾಯ್ಕ ರವರು ಅವರ ಪಾಲಿನ ಜಮೀನನ್ನು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ. ಈಗ ಪುರುಷೋತ್ತಮ ಹಾಗೂ ವಾಸುದೇವ ಕವಲಿನವರ ಪಾಲು ಜಮೀನುಗಳು ಉಳಿದುಕೊಂಡಿರುವುದು. ಪುರುಷೋತ್ತಮರವರ ಪಾಲಿನ ಆಸ್ತಿಯಲ್ಲಿ ನಮಗೆ ಎಷ್ಟು ಹಕ್ಕು ಇದೆ, ಅಷ್ಟೇ ಹಕ್ಕು ಪ್ರತಿವಾದಿ 6 ರಿಂದ 9 ರವರೆಗೆ ಇದೆ ಎಂದರೆ ಸರಿ. ಪ್ರತಿವಾದಿ 6 ರಿಂದ 9 ರವರೆಗೆ ಭಾಗ ನೀಡುವುದಕ್ಕೆ ನನ್ನದೇನು ತಕರಾರು ಇರುವುದಿಲ್ಲ. 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ಪಾಲಿನ ಹಕ್ಕು ಇರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.